ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	2083
ಸದಸ್ಯರ ಹೆಸರು	ಡಾ॥ ವೈ.ಎ ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ)
ವಿಷಯ	ಮಾಸಾಶನದ ಬಗ್ಗೆ
ಉತ್ತರಿಸಬೇಕಾದ ದಿನಾಂಕ	24.03.2021
ಉತ್ತರಿಸುವ ಸಚಿವರು	ಕಂದಾಯ ಸಚಿವರು
ಪ್ರಶ್ನೆ	ಉತ್ತರ
ಅ) ಮನೆಬಾಗಿಲಿಗೆ "ಮಾಸಾಶನ" ಯೋಜನೆ ಕಂದಾಯ ಇಲಾಖೆಯಲ್ಲಿ ಜಾರಿಗೆ ಬಂದಿದ್ದು ಯಾವಾಗಿನಿಂದ;	"ಮನೆ ಬಾಗಿಲಿಗೆ ಮಾಸಾಶನ"ವು ಸರ್ಕಾರದ ಸ್ವಯಂ ಪ್ರೇರಿತ ಪಿಂಚಣಿ ಮಂಜೂರಾತಿ ಅಭಿಯಾನ ಕಾರ್ಯಕ್ರಮವಾಗಿದ್ದು, ಸದರಿ ಅಭಿಯಾನವನ್ನು ದಿನಾಂಕ:27.01.2021 ರಂದು ಸನ್ಮಾನ್ಯ ಮುಖ್ಯಮಂತ್ರಿಗಳು ವಿದ್ಯುಕ್ತವಾಗಿ ಚಾಲನೆ ನೀಡಿದ್ದು, ರಾಜ್ಯಾದ್ಯಾದಂತ ಜಾರಿಯಲ್ಲಿರುತ್ತದೆ.
ಆ) ಈ ಯೋಜನೆ ಎಲ್ಲಾ ಜಿಲ್ಲೆಗಳಲ್ಲಿ ಅನುಷ್ಠಾನಗೊಳಿಸಲಾಗಿದೆಯೇ;	ಸದರಿ ಕಾರ್ಯಕ್ರಮವನ್ನು ಪ್ರಾಯೋಗಿಕವಾಗಿ ಹೊಸಪೇಟೆ, ಬ್ರಹ್ಮಾವರ ಹಾಗೂ ಮಾಗಡಿ ತಾಲ್ಲೂಕುಗಳಲ್ಲಿ ದಿನಾಂಕ:15.01.2021 ರಿಂದ ಚಾಲನೆ ನೀಡಲಾಗಿದ್ದು, ಮುಂದುವರೆದು ದಿನಾಂಕ:24.02.2021 ರಿಂದ ರಾಜ್ಯದ ಎಲ್ಲಾ ಜಿಲ್ಲೆಗಳಿಗೆ ಮೊಬೈಲ್ ಆ್ಯಪ್ ಆಧಾರಿತ ತಂತ್ರಾಂಶದ ಬಗ್ಗೆ ತರಬೇತಿ ನೀಡಿ ಚಾಲನೆ ನೀಡಲಾಗಿದೆ.
ಇ) ಈ ಯೋಜನೆಯ ಫಲಾನುಭವಿಗಳಿಗೆ ನೀಡಲಾಗುತ್ತಿರುವ ಮಾಸಾಶನ ಎಷ್ಟು;	ಸದರಿ ಕಾರ್ಯಕ್ರಮದಡಿ ಸರ್ಕಾರವು ಮೊದಲ ಹಂತದಲ್ಲಿ ನಾಗರೀಕರ ವಯಸ್ಸು ಹಾಗೂ ಕುಟುಂಬ ಆದಾಯ ಮಾಹಿತಿ ಆಧರಿಸಿ 60 ವರ್ಷ ಹಾಗೂ ಮೇಲ್ಪಟ್ಟ ಅರ್ಹರಿಗೆ ವೃದ್ಧಾಪ್ಯ ವೇತನ ಹಾಗೂ ಸಂಧ್ಯಾ ಸುರಕ್ಷಾ ಯೋಜನೆಯಡಿ ಸ್ವಯಂ ಪ್ರೇರಿತವಾಗಿ ಫಲಾನುಭವಿಗಳನ್ನು ಗುರುತಿಸಿ ಪಿಂಚಣಿ ಮಂಜೂರು ಕಾರ್ಯಕ್ಕೆ ಚಾಲನೆ ನೀಡಲಾಗಿದೆ. ವೃದ್ಧಾಪ್ಯ ವೇತನ ಯೋಜನೆ ನಿಯಮಗಳನ್ವಯ 60-64 ವರ್ಷದ ಅರ್ಹರಿಗೆ ಮಾಸಿಕ ರೂ.600 ರಂತೆ ಹಾಗೂ 65 ವರ್ಷ ಮೇಲ್ಪಟ್ಟ ವೃದ್ಧರಿಗೆ ಸಂಧ್ಯಾ ಸುರಕ್ಷಾ ಯೋಜನೆಯಡಿ ಮಾಸಿಕ ರೂ.1000 ರಂತೆ ಪಿಂಚಣಿ ಪಾವತಿಸಲಾಗುವುದು.
ಈ) ಈ ಯೋಜನೆಗೆ ಸರ್ಕಾರದಿಂದ ವಾರ್ಷಿಕವಾಗಿ ವೆಚ್ಚ ಮಾಡುತ್ತಿರುವ ಹಣ ಎಷ್ಟು?	ವೃದ್ಧಾಪ್ಯ ವೇತನ ಹಾಗೂ ಸಂಧ್ಯಾ ಸುರಕ್ಷಾ ಯೋಜನೆಯ ಅನುಷ್ಠಾನಕ್ಕಾಗಿ ಪ್ರಸಕ್ತ ವರ್ಷದಲ್ಲಿ ಒಟ್ಟು ರೂ.4270.65 ಕೋಟಿ ವೆಚ್ಚ ಮಾಡಲಾಗಿದೆ.

ಡಿಎಸ್ಎಸ್‌ಪಿ/ಎಲ್‌ಸಿಕ್ಯೂ/12/2021

(ಆರ್. ಅಶೋಕ)
ಕಂದಾಯ ಸಚಿವರು